ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ಕಲ್ಲು ಮನಸ್ಸು ಕರಗಿಸುವ ಭಾಷಣಕ್ಕೂ, ಕಲ್ಲು ಬೀಳುವ ಭಾಷಣಕ್ಕೂ ಏನು ವ್ಯತ್ಯಾಸ?*



ಅದು ಭೋರ್ಗರೆಯುತ್ತದೆ; ಇದು ಬೋರ್ ಕೊರೆಯುತ್ತದೆ.

ಪಿ.ಜೆ. ರಾಘವೇಂದ್ರ, ಮೈಸೂರು

*ಸಮ್ಮಿಶ್ರ ಸರ್ಕಾರ ದ್ವೈತವೋ, ಅದ್ವೈತವೋ, ವಿಶಿಷ್ಟಾದ್ವೈತವೋ?*

ವಿಚ್ಛಿದ್ರಾದ್ವೈತ.

ಡೈರಿ ವಿಶ್ವನಾಥ್, ಬೆಂಗಳೂರು

*ಸುಳ್ಳು ಹೇಳುವುದು ಹೇಗೆ?*

ತಪ್ಪು ಮಾಡಿಬಿಡಿ. ತಾನಾಗಿಯೇ ಹೊಳೆಯುತ್ತದೆ.

ತುರಗಲ್ಲ ಉಮೇಶ, ರಾಮದುರ್ಗ

*ಸಮಾಜಸೇವೆ ಮಾಡಲು ಮಂತ್ರಿ ಪದವಿ ಬೇಕೆ?*

ಊಹೂಂ. ಈಗ ಸಮಾಜವನ್ನು ಮಂತ್ರಿಗಳಿಂದ save ಮಾಡುವಂತಹ ಪದವಿ ಬೇಕು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ವಿದ್ಯುತ್ ಶಕ್ತಿಗೂ, ಸ್ತ್ರೀ ಶಕ್ತಿಗೂ ವ್ಯತ್ಯಾಸವೇನು ಸಾರ್?*




ವಿದ್ಯುತ್ ಶಕ್ತಿ ತಿಂಗಳಿಗೊಮ್ಮೆ ಮಾತ್ರ ಬಿಲ್ ಮುಂದಿಡುತ್ತದೆ.

ತಲಕಾಡು ಶ್ರೀನಿಧಿ, ಬೆಂಗಳೂರು

*ಸಾಲಮನ್ನಾ ಮಾಡಲು ದುಡ್ಡು ಹೊಂದಿಸಲು ಇಲ್ಲಿನ ಪ್ರಶ್ನೆಗಳಿಗೆ ತೆರಿಗೆ ವಿಧಿಸುತ್ತಾರಂತೆ. ಹೌದಾ ಸಾರ್?*

ಊಹೂಂ. ಕೇವಲ ಟೈಟಲ್ ಕದ್ದು, ಬದಲಿಸಿ, 'ನೀವು ಕೇಳದಿರಿ' ಎಂಬ ಸಾಲನ್ನು ಬ್ಯಾಂಕಿಗರಿಗೆ ಕೊಡುತ್ತಾರಂತೆ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ಬೆಂಗಳೂರಿನ ಗದ್ದಲದ ಗೂಡು ಯಾವುದು?*

ಬೆಂಗಳೂರಿನದೆಂದಲ್ಲ, ದೇಶದಲ್ಲೆಲ್ಲ ಗದ್ದಲದ ಗೂಡು ಒಂದೇ ಸೈಲೆನ್ಸರ್ ಕಿತ್ತೆಸೆದ ಮೋಟರ್‌ಬೈಕ್.

ನರಸಿಂಹ ಪೈ, ಹೊನ್ನಾವರ

*ವೈದ್ಯ ನರನೋ, ನಾರಾಯಣನೋ?*

'ಲಕ್ಷ್ಮಿ'ಯಿಂದಲೇ ಸೇವೆ ಆರಂಭವೆಂಬ ಧೋರಣೆ ಇರುವ ಹಲವರಂತೂ ನಾರಾಯಣರೇ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಬೆಂಕಿ ಇಲ್ಲದೆ ಹೊಗೆ ಬರುತ್ತಿದೆ ಎಂಬುದರ ನಿಜವಾದ ಅರ್ಥವೇನು?*

ಪತ್ನಿ ಕೋಪಗೊಂಡಿದ್ದಾಳೆ, ಕಣ್ಣಿನಲ್ಲಿ ಕೆಂಪು, ಕಿವಿ, ಮೂಗು, ಬಾಯಿಗಳಲ್ಲಿ ಹೊಗೆ ಎದ್ದಿದೆ. ಗಂಡೇ, ಎಚ್ಚರ!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*ರಾಮ್‌ಜೀ, ನಿಮ್ಮನ್ನು ಫೇಸ್‌ಬುಕ್‌ನಲ್ಲಿ ನೋಡಿದ ನೆನಪು...?*

ಕೊಂಚ ವ್ಯತ್ಯಾಸ; ನನ್ನ ಫೇಸ್ ಹೆಚ್ಚಾಗಿ ಬುಕ್‌ನಲ್ಲೇ ಹುದುಗಿರುತ್ತದೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಅನ್ನದೇವರ ಮುಂದೆ ಇನ್ನು ದೇವರಿಲ್ಲವೆನ್ನುವ ನಾವು ಸಮಾರಂಭಗಳಲ್ಲಿ ಅನ್ನವನ್ನು ಪೋಲು ಮಾಡುತ್ತೇವಲ್ಲ....?*

ಸಕಲ ಜೀವಿಗಳಲ್ಲಿ ದೇವನಿರುವನಂತೆ, ಅನ್ನದೇವನೂ ನರನಿಂದ ಬ್ಯಾಕ್ಟೀರಿಯಾಗಳ ವರೆಗೆ ತಲುಪಲೆಂಬ ಸದುದ್ದೇಶ.

ಎ.ಪಿ. ರಂಗನಾಥ್, ಮೈಸೂರು

*ಬಟ್ಟೆಗಳು ಒಗೆದಷ್ಟೂ ಶುಭ್ರವಾಗುತ್ತವೆ. ಆದರೆ ನೆಟ್ ಬನಿಯನ್ ಒಗೆದಷ್ಟೂ ಕಪ್ಪಾಗುತ್ತದಲ್ಲಾ..?*

ಬಹೂಪಯೋಗಿ ಆಗುವ ಬಯಕೆಯಂತೆ. ಇಂದಿನ ನೆಟ್ ಬನೀನೇ ನಾಳಿನ ಸಾರ್ಸೋ ಬಟ್ಟೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಕೆಲವರು ನಮ್ಮ ಕೈ ಹಿಡಿದುಕೊಂಡು ಇದನ್ನೇ ನಿಮ್ಮ ಕಾಲು ಅಂದ್ಕೊಳಿ ಅಂತಾರಲ್ಲಾ, ಯಾಕೆ?*

ಅವರೇಕಾದರೂ ಕೇಳಲಿ, ಒಪ್ಪಬೇಡಿ. ಹಾಗೆಂದುಕೊಂಡುಬಿಟ್ಟರೆ ನಡೆಯುವುದು ಬಹಳ ಕಷ್ಟವಾಗುತ್ತದೆ.

## ಬಹುಮಾನಿತ ಪ್ರಶ್ನೆ

ಎಂ.ಎ. ಕುಮಾರ್, ಬೆಂಗಳೂರು

*ಸ್ವರ್ಗದ ಬಾಗಿಲು ಒಂದೇ ದಿನ ತೆಗೆದಿರುತ್ತದೆ. ನರಕದ ಬಾಗಿಲು ಸದಾ ತೆಗೆದಿರುತ್ತದೆ. ಕಾರಣ?*

ಸ್ವರ್ಗ ಅಶ್ವದ ಗರ್ಭದಂತೆ ವರ್ಷಕ್ಕೊಂದೇ ಎಂಟ್ರಿ. ನರಕ ಗಯ್ಯಾಳಿಯ ಬಾಯಿ.

ದೀಪಾ ವೆಂಕಟೇಶ ಮಹಾಲೆ, ಸಾಂಬ್ರಾಣಿ

*ವಕೀಲ ಸಾರಿ ಎನ್ನುವುದಕ್ಕೂ, ಡಾಕ್ಟರ್ ಸಾರಿ ಎನ್ನುವುದಕ್ಕೂ ಏನು ವ್ಯತ್ಯಾಸ?*

30 ಚದರ ಅಡಿಗಳು; ಜೈಲು ಆರಡಿ ಎಂಟಡಿ, ಗೋರಿ ಆರಡಿ ಮೂರಡಿ.

ಅಮರಯ್ಯ ಪತ್ರಿಮಠ, ಸುರಪೂರ

*ಅಂತ್ಯವಿಲ್ಲದ ಹಾದಿ ಯಾವುದು?*

ಸರ್ಕಲ್.

ಎಂ. ಕೃಷ್ಣಾನಂದಶೆಟ್ಟಿ, ಮುಲ್ಕಿ

*ನಮ್ಮನ್ನು ಅತಿ ದೂರ ಮಾಡುವ ವಸ್ತು ಯಾವುದು?*



ಸಾಲ.

ಮಲ್ಲಿಕಾರ್ಜುನ ಗಚ್ಚಿ, ಗೋಗಿ

*ಕೇವಲ ಭಕ್ತಿ ಪ್ರಿಯನಾಗಿರಬೇಕಾದ ದೇವರು ಹರಕೆಯಂತಹ ಆಮಿಷಕ್ಕೆ ಬಲಿಯಾಗುವನಲ್ಲ, ಏಕೆ?*

ಹರಕೆ ತೀರಿಕೆಗೆ ಅವಶ್ಯವಾದ ವಸ್ತುಗಳ ವ್ಯಾಪಾರಸ್ಥರು 'ಉದ್ಧಾರ ಮಾಡಪ್ಪಾ' ಎಂದು ಅರ್ಜಿ ಹಾಕಿರುತ್ತಾರಲ್ಲ.

ಎಚ್.ಆರ್. ಪ್ರಕಾಶ್, ಶಿವಮೊಗ್ಗ

*ರಾಜ್ಯದ ಸಮ್ಮಿಶ್ರ ಸರ್ಕಾರ ಯಾವುದರ ಮೇಲೆ ನಿಂತಿದೆ?*

ವಿರೋಧ ಪಕ್ಷದ ಮೂರ್ಖತನದ ಮೇಲೆ.

ಬಾ.ರಂ. ಸುರೇಶ, ಶಿವಮೊಗ್ಗ

*ಕಂಡ ಕಂಡ ದೇವತೆಗಳಿಗೆ ಕೈ ಮುಗಿದರೂ ನನ್ನ ಸಮಸ್ಯೆ ಪರಿಹಾರವಾಗುತ್ತಿಲ್ಲವಲ್ಲಾ....?*

ಕಲ್ಲಿಗೆ ಕೈ ಮುಗಿಯುವ ಬದಲು ಕಲ್ಲುಮನಸ್ಸಿನಿಂದ ಎದುರಿಸಿ ನೋಡಿ. ಕೂಡಲೆ ಪರಿಹಾರವಾದೀತು.

ರಾಮ್